**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :37 ಸಿಡಬ್ಲು :55

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ರಾಮಗೊಂಡ ಬಸರಗಿ |
| ತಂದೆಯ ಹೆಸರು | : ಶ್ರೀ ಬೈರಪ್ಪ |
| ವಯಸ್ಸು | : 57 ವರ್ಷ |
| ಉದ್ಯೋಗ | : ಹೆಚ್ಚುವರಿ ಆರಕ್ಷಕ ಅಧೀಕ್ಷಕರು, ಬೆಳಗಾವಿ ಜಿಲ್ಲೆ |
| ವಾಸ್ತವ್ಯ | : ಬೆಳಗಾವಿ |
| ದಿನಾಂಕ | : 14-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2017 ಅಕ್ಟೋಬರ್ ತಿಂಗಳಿನಿಂದ 2019 ಅಗಸ್ಟ್ ವರೆಗೆ ಡಿ.ವೈ.ಎಸ್.ಪಿ ಆಗಿ ಅಥಣಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 18-10-2017 ರಂದು ಚಾಸಾಃ 54 ಸತೀಶ ಚಿಟಗುಬ್ಬಿ ಡಿ.ವೈ.ಎಸ್.ಪಿ ಇವರು ವರ್ಗಾವಣೆಗೊಂಡಿದ್ದರಿಂದ ಅವರ ಸ್ಥಳಕ್ಕೆ ನಾನು ನೇಮಕಗೊಂಡಿದ್ದರಿಂದ ಈ ಪ್ರಕರಣದ ತನಿಖೆಯನ್ನು ಚಾಸಾಃ 54 ರವರಿಂದ ವಹಿಸಿಕೊಂಡು, ಅಲ್ಲಿಯವರೆಗೆ ಆಗಿದ್ದ ತನಿಖೆಯನ್ನು ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದೇನೆ.

3. ದಿನಾಂಕಃ 09-11-2017 ರಂದು RFSL ಬೆಳಗಾವಿ ಇವರಿಂದ ಚಾಸಾಃ 51 ರವರಿಂದ ವರದಿಯನ್ನು ಪಡೆದುಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-66 ಎಂದು

ಗುರುತಿಸಲಾಗಿದೆ. ದಿನಾಂಕಃ 22-12-2017 ರಂದು ಪ್ರಥಮ ವರ್ತಮಾನ ವರದಿಯಲ್ಲಿ ನಮೂದಿಸಿದ 35 ನೇ ಆರೋಪಿ ಅಶೋಕ ರಾಮಪ್ಪ ಬಾಬನ್ನವರ ಇವರಿಗೆ ಸಂಬಂಧಿಸಿದ ಶಾಲಾ ಹಾಜರಾತಿ ಪತ್ರವನ್ನು ನೀಡುವಂತೆ ಮುಖ್ಯೋಪಾಧ್ಯಯರು ಮಹಾವೀರ ಕನ್ನಡ ಮಾಧ್ಯಮ ಶಾಲೆ, ಮುಗಳಖೋಡ ಇವರಿಗೆ ಪತ್ರವನ್ನು ಬರೆದಿದ್ದು ಸದರಿಯವರು 35 ನೇ ಆರೋಪಿ ಅಶೋಕ ರಾಮಪ್ಪ ಬಾಬನ್ನವರ ಅವರು ದಿನಾಂಕಃ 26-08-2017 ರಂದು ಘಟನೆ ನಡೆದ ದಿನದಂದು ಬೆಳಗ್ಗೆ 8:30 ರಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಶಾಲೆ ಯಲ್ಲಿ ಕರ್ತವ್ಯದಲ್ಲಿದ್ದರು ಎಂದು 2 ನೇ ತರಗತಿಗೆ ಬೋಧನೆ ಮಾಡಿದ್ದರು ಎಂದು ವರದಿ ನೀಡಿದ್ದು ಆ ಕಾರಣ ಅವರನ್ನು ದೋಷಾರೋಪಣಾ ಪಟ್ಟಿಯಲ್ಲಿ ಕೈಬಿಡಲಾಗಿದೆ. ಮನವಿಯನ್ನು ನಿಪಿ-67 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-67 [ಎ] ಎಂದು ಗುರುತಿಸಲಾಯಿತು. ಮಹಾವೀರ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ಇವರ ವರದಿಯನ್ನು ನಿಪಿ-68 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-68 [ಎ] ಎಂದು ಗುರುತಿಸಲಾಯಿತು.

4. ಪ್ರಥಮ ವರ್ತಮಾನ ವರದಿ ಪ್ರಕಾರ 36 ನೇ ಆರೋಪಿ ಸಿದ್ದು ಪರಪ್ಪ ಹುಲ್ಲೋಳ್ಳಿ ಅವರು ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನಲ್ಲಿ ಅಸಿಸಟಂಟ್ ಕಮೀಷನರ ಆಗಿ ದಿನಾಂಕಃ 26-08-2017 ರಂದು ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಹಾವೇರಿ ಜಿಲ್ಲೆ ಜಿಲ್ಲಾಧಿಕಾರಿಗಳು ವರದಿ ನೀಡಿದ್ದನ್ನು ಹಿಂದಿನ ತನಿಖಾಧಿಕಾರಿಗಳು ಸಂಗ್ರಹಿಸಿದ್ದ ಕಾರಣ ಅವರನ್ನು ಈ ಪ್ರಕರಣದಿಂದ ಕೈಬಿಡಲಾಗಿದೆ.

5. ಪ್ರಥಮ ವರ್ತಮಾನ ವರದಿ ಪ್ರಕಾರ 15 ನೇ ಆರೋಪಿ ಬಾಹುಬಲಿ ಪರಪ್ಪ ಹುಲ್ಲೋಳ್ಳಿ ಇವರು ರಾಯಬಾಗ ತಾಲೂಕಿನಲ್ಲಿ ಅಬಕಾರಿ ಇಲಾಖೆಯ ನೀರಿಕ್ಷಕರಾಗಿ ದಿನಾಂಕಃ 26-08-2017 ರಂದು ಕರ್ತವ್ಯದಲ್ಲಿದ್ದರು ಎಂದು, ಅವರು ಕೃತ್ಯದಲ್ಲಿ

ಭಾಗಿಯಾದ ಬಗ್ಗೆ ಯಾವುದೇ ಸಾಕ್ಷಾಧಾರಗಳು ಕಂಡುಬರದೇ ಇದ್ದುದರಿಂದ ಅವರನ್ನು ಪ್ರಕರಣದಿಂದ ಕೈಬಿಡಲಾಗಿದೆ. ತನಿಖೆಯಲ್ಲಿ ಭಾರತ ದಂಡ ಸಂಹಿತೆ ಕಲಂ 307 ಹಾಗೂ ಕಲಂ 506 ಕ್ಕೆ ಸಂಬಂಧಿಸಿದಂತೆ ಸಾಕ್ಷಾಧಾರಗಳು ಇಲ್ಲದೇ ಇರುವುದರಿಂದ ಆ ಎರಡೂ ಕಲಂಗಳನ್ನು ಕೈಬಿಟ್ಟು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಜೆ.ಜೆ ವಕೀಲರಿಂದ**

ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ ನಾನು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಟೌನ ಪಂಚಾಯತಿಯವರು ದಾಖಲೆಗಳನ್ನು ನೀಡುವಂತೆ ಹಿಂದಿನ ತನಿಖಾಧಿಕಾರಿಗಳು ಮನವಿಯನ್ನು ಮಾಡಿದ್ದು ಅದರಂತೆ ಟೌನ ಪಂಚಾಯತಿಯವರು ನೀಡಿದ ದಾಖಲೆಗಳನ್ನು ಪರಿಶೀಲಿಸಿದ್ದೇನೆ. 1950 ರಿಂದ ಕಂದಾಯ ದಾಖಲೆಗಳು ಬಾಬನ್ನವರ ಅವರ ಹೆಸರಿನಲ್ಲಿದೆ ಎನ್ನುವುದಕ್ಕೆ ಸಾಕ್ಷಿ ಅದನ್ನು ಅವರು ಸೃಷ್ಟಿ ಮಾಡಿರಬಹುದು ಎಂದು ಹೇಳಿದ್ದಾರೆ. ಘಟನೆಗೂ,ಕಂದಾಯ ದಾಖಲೆಗಳು ಸಂಬಂಧ ಇದೆ ಎನ್ನುವುದು ನನಗೆ ಕಂಡು ಬಂದಿರುವುದಿಲ್ಲ, ಆ ಕಾರಣ ದಾಖಲೆಗಳ ಬಗ್ಗೆ ಪಂಚಾಯತಿ ಅಧಿಕಾರಿಗಳನ್ನು ನಾನು ವಿಚಾರಿಸಿರುವುದಿಲ್ಲ.

2. ಘಟನೆಯು ಆಸ್ತಿ ಸಂಖ್ಯೆ 643 ಎ/1/2 ರಲ್ಲಿ ನಡೆದಿದೆ ಎನ್ನುವುದು ಸರಿಯಲ್ಲ. ಆ ಆಸ್ತಿಯ ಹತ್ತಿರದಲ್ಲಿ ಗಲಾಟೆ ಆಗಿರುತ್ತದೆ. ಗಲಾಟೆಯ ಬಗ್ಗೆ ಮಾತ್ರ ನಾನು ತನಿಖೆ ಮಾಡಿ

ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ. ನಿಪಿ–14 ರಲ್ಲಿ ಘಟನೆಯು ನಿವೇಶನ ಸಂಖ್ಯೆ 643 /ಎ1 ಇದರಲ್ಲಿ ಆಗಿದೆ ಎಂದು ತೋರಿಸಲಾಗಿದೆ ಎನ್ನುವುದಕ್ಕೆ ಸಾಕ್ಷಿ ನಾನು ಆಸ್ತಿಯ ಬಗ್ಗೆ ತನಿಖೆ ಮಾಡಿಲ್ಲ, ಘಟನೆ ಬಗ್ಗೆ ಮಾತ್ರ ತನಿಖೆ ಮಾಡಿದ್ದೇನೆ ಎಂದು ಹೇಳಿದ್ದಾರೆ. ಆಸ್ತಿ ಸಂಖ್ಯೆ 643/ಎ1 ಇದು ಗಾಂವಠಾಣಕ್ಕೆ ಸೇರಿದ ಜಾಗ ಎಂದು ತೋರಿಸಲು ದಾಖಲೆಯನ್ನು ಸಂಗ್ರಹಿಸಿಲ್ಲ ಎನ್ನುವುದು ಸರಿ.

3. ಕಟ್ಟಡ ಕಟ್ಟಲು ಪರವಾನಿಗೆಯನ್ನು ಪಡೆಯುವ ಸಮಯದಲ್ಲಿ ಆರೋಪಿತರು ಪುರಸಭೆಗೆ ಸಲ್ಲಿಸಿದ ದಾಖಲೆಗಳನ್ನು ನೀವು ಪರಿಶೀಲಿಸಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿದ್ದಾರೆ. ಸದರಿ ನಿವೇಶನದಲ್ಲಿ ಕಟ್ಟಡ ಕಟ್ಟಬಾರದು ಎಂದು, ಅದರಲ್ಲಿ ಮಾದರ ಸಮಾಜದವರು ಭವನ ಕಟ್ಟಲು ನೀಡಬೇಕೆಂದು ಮುಖ್ಯಾಧಿಕಾರಿಗಳು ಪುರಸಭೆ ಇವರಿಗೆ 68 ಜನರು ಸಹಿ ಮಾಡಿ ನೀಡಿದ ಮನವಿಯನ್ನು ನಾನು ದೋಷಾರೋಪಣೆ ಪಟ್ಟಿಯೊಂದಿಗೆ ಸಲ್ಲಿಸಿದ್ದೇನೆ ಎನ್ನುವುದು ಸರಿ. ಅದನ್ನು ನಿಡಿ–3 ಎಂದು ಗುರುತಿಸಲಾಯಿತು.

4. ರಾವುಸಾಬ ಬಾಬನ್ನವರ ಮತ್ತು ಅವರ ಅಣ್ಣತಮ್ಮಂದಿರಗೆ 643/ಎ1 ನ್ನು ವಿಭಾಗ ಮಾಡಿಕೊಂಡಿದ್ದು ಅದರಂತೆ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದು, ಪುರಸಭೆಯವರು ಅಂಗೀಕರಿಸಿದ ಬಗ್ಗೆ ನಡಾವಳಿ ಯಥಾ ಪ್ರತಿಯನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಹಾಜರುಮಾಡಲಾಗಿದೆ ಎನ್ನುವುದು ಸರಿ. ಅದನ್ನು ನಿಡಿ–4 ಎಂದು ಗುರುತಿಸಲಾಯಿತು.

5. ನಿಪಿ–23, ನಿಪಿ–24, ನಿಪಿ–25, ನಿಪಿ–26, ನಿಪಿ–27, ನಿಪಿ–28, ನಿಪಿ–29, ನಿಪಿ–30, ನಿಪಿ–31, ನಿಪಿ–33, ನಿಪಿ–34, ನಿಪಿ–35, ನಿಪಿ–36, ನಿಪಿ–37, ನಿಪಿ–38, ನಿಪಿ–39, ನಿಪಿ–40 ಮತ್ತು ನಿಪಿ–42 ಇವುಗಳಲ್ಲಿ ದೇಹದ ಹೊರಮೈ ಮೇಲೆ ಗಾಯಗಳು

ಇಲ್ಲ ಎಂದು ವೈದ್ಯರು ಪ್ರಮಾಣ ಪತ್ರ ನೀಡಿದ್ದಾರೆ ಎನ್ನುವುದು ಸರಿ. ನಿಪಿ-41 ರಲ್ಲಿ ಸಾಧಾ ಸ್ವರೂಪದ ಗಾಯ ಎಂದು ಬರೆದು ಹೊಡೆದುಹಾಕಲಾಗಿದೆ ಆ ಬಗ್ಗೆ ನೀವು ವಿಚಾರಣೆ ಮಾಡಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಅದನ್ನು ಹಿಂದಿನ ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ ಎಂದು ಹೇಳಿದ್ದಾರೆ. ಆ ರೀತಿ ಹೊಡೆದು ಹಾಕಿದ್ದ ಬಗ್ಗೆ ಸಹಿ ಮಾಡಿಲ್ಲ ಎನ್ನುವುದು ಸರಿ.

6. ದೂರುದಾರರು ಮತ್ತು ಅವರ ಕಡೆಯವರು ತಮಗೆ ವಿವಾದಿತ ಸ್ಥಳದಲ್ಲಿ ಭವನ ಕಟ್ಟುವುದಿದೆ ಎಂದು ಹೇಳಿ ಆರೋಪಿತರು ಮನೆ ಕಟ್ಟುವುದು ಬೇಡ ಎಂದು ಕಲ್ಲು ತೂರಾಟ ಮಾಡುತ್ತಿದ್ದು, ಆ ಸಮಯದಲ್ಲಿ ಊರಿನ ಜನರು ಆ ಸ್ಥಳಕ್ಕೆ ಬರುತ್ತಿದ್ದಾಗ ಕಲ್ಲು ಹೊಡೆಯುತ್ತಿದ್ದವರು ತಾವೇ ಓಡಿಹೋಗುವಾಗ ಬಿದ್ದು ಗಾಯ ಮಾಡಿಕೊಂಡಿದ್ದಾರೆ ನನ್ನ ತನಿಖೆಯಲ್ಲಿ ಕಂಡುಬಂತು ಎನ್ನುವುದು ಸರಿಯಲ್ಲ. ಆ ರೀತಿ ಕಲ್ಲು ತೂರಾಟದಲ್ಲಿ ಆಸ್ತಿಯ ಮಾಲೀಕರಿಗೂ ಸಹ ಗಾಯಗಳಾಗಿದ್ದವು ಎನ್ನುವುದು ಸರಿಯಲ್ಲ.

7. ಆರೋಪಿತರು ದೂರುದಾರರಿಗೆ ಜಾತಿ ಹೆಸರು ಹಿಡಿದು ಅವಾಚ್ಯವಾಗಿ ಬೈಯುವುದಾಗಲೀ, ಹಲ್ಲೆ ಮಾಡುವುದಾಗಲೀ ಮಾಡಿಲ್ಲ ಎಂದು ತನಿಖೆಯಲ್ಲಿ ಕಂಡುಬಂತು ಎನ್ನುವುದು ಸರಿಯಲ್ಲ. ಈ ಪ್ರಕರಣದ ಕೌಂಟರ ಕೇಸನಲ್ಲೂ ಸಹ 17 ಜನರ ಮೇಲೆ ನಾನು ತನಿಖೆಯನ್ನು ಮಾಡಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

8. ಅಪರಾಧ ಸಂಖ್ಯೆ 158/2017 ರಲ್ಲಿ ಡಿ.ವೈ.ಎಸ್.ಪಿ ಅವರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರಕರಣದ ತನಿಖೆಯಲ್ಲಿ ಆರೋಪಿತರು ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ನಾನು ಯಾಂತ್ರಿಕವಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ಮು.ಮಾ.1 , ಮು.ಮಾ.2

ಮತ್ತು ಮು.ಮಾ.3 ಈ ಪ್ರಕರಣಕ್ಕೆ ಸಂಬಂಧಿಸದೇ ಇದ್ದರೂ ಸಹ ಅವುಗಳನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.